ಕರ್ನಾಟಕ ಸರ್ಕಾರದ ನಡವಳಿಗಳು.

ವಿಷಯ:-ಶ್ರೀ ಇಂದ್ರೇಶ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಗುಡಿಬಂಡೆ, ಚಿಕ್ಕಬಳ್ಳಾಪುರ ಜಿಲ್ಲೆ ಇವರ ವಿರುದ್ಧದ ಶಿಸ್ತು ಕ್ರಮ- ಅಂತಿಮ ಆದೇಶ.

ಓದಲಾಗಿದೆ: 1. ಸರ್ಕಾರದ ಕಾರಣ ಕೇಳುವ ನೋಟೀಸ್ ಸಂಖ್ಯೆ:ಗ್ರಾಅಪ 228 ವಿಸೇಬಿ 2014. ದಿನಾಂಕ:03-02-2014.

2. ಶ್ರೀ ಇಂದ್ರೇಶ್ ಇವರ ಲಿಖಿತ ಹೇಳಿಕೆ ದಿನಾಂಕ:19-02-2013.

3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಚಿಕ್ಕಬಳ್ಳಾಪುರ ಇವರ ಪತ್ರ ಸಂಖ್ಯೆ:ಜಿಪಂಚಿ/ಆಡಳಿತ/ಕಾನಿಅ/ತಾಪಂಗು/ಶಿಕ್ರ/ಸಿಆರ್/ 2014-2015/1263.ದಿ:07-11-2015.

-----

ಪ್ರಸ್ತಾವನೆ:-

ಶ್ರೀ ಇಂದ್ರೇಶ್, ಇವರು ಈ ಹಿಂದೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಗುಡಿಬಂಡೆ, ಚಿಕ್ಕಬಳ್ಳಾಪುರ ಜಿಲ್ಲೆ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ಎಸಗಿದ್ದಾರೆನ್ನಲಾದ ಕರ್ತವ್ಯಲೋಪ/ದುರ್ನಡತೆ ಆರೋಪಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 12(1) (ಎ) ರಡಿಯಲ್ಲಿ ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ: 03-02-2014ರಂದು ಕಾರಣ ಕೇಳುವ ನೋಟೀಸಿನೊಂದಿಗೆ ದೋಷಾರೋಪಣಾ ಪಟ್ಟಿಯನ್ನು ಜಾರಿ ಮಾಡಲಾಗಿತ್ತು.

ಶ್ರೀ ಇಂದ್ರೇಶ್, ಹಿಂದಿನ ಕಾನಿಅ, ತಾಪಂ, ಗುಡಿಬಂಡೆ, ಚಿಕ್ಕಬಳ್ಳಾಪುರ, ಇವರು ಮೇಲೆ ಓದಲಾದ ಕ್ರಮಸಂಖ್ಯೆ: (2)ರ ದಿನಾಂಕ 19-2-2013ರ ಲಿಖಿತ ಹೇಳಿಕೆಯಲ್ಲಿ ಸದರಿಯವರಿಗೆ ಜಾರಿಗೊಳಿಸಲಾದ 11 ಆರೋಪಗಳನ್ನು ಅಲ್ಲಗಳೆಯುತ್ತಾ, ಗುಡಿಬಂಡೆ ತಾಲ್ಲೂಕು ಪಂಚಾಯತಿಯಲ್ಲಿ ಹಲವಾರು ಹುದ್ದೆಗಳು ಖಾಲಿ ಇದ್ದರೂ ಸಹ ಎಂಜಿಎನ್ಆರ್ಇಜಿಎ, 13ನೇ ಹಣಕಾಸು ಯೋಜನೆ, ವಸತಿ ಯೋಜನೆಗಳು, ನಿರ್ಮಲ ಭಾರತ ಅಭಿಯಾನ ಯೋಜನೆಗಳು ಹಾಗೂ ಇತರೆ ಯೋಜನೆಗಳನ್ನು ಉತ್ತಮವಾಗಿ ಅನುಷ್ಠಾನಗೊಳಿಸಿರುವುದಾಗಿಯೂ ತಾವು ಯಾವುದೇ ಕರ್ತವ್ಯಲೋಪ/ದುರ್ನಡತೆ ಮಾಡಿರುವುದಿಲ್ಲವೆಂದು, ಆದುದರಿಂದ, ಈ ಆರೋಪಗಳಿಂದ ಮುಕ್ತಗೊಳಿಸಲು ಕೋರಿರುತ್ತಾರೆ.

ಸದರಿ ಅಧಿಕಾರಿಯ ಹೇಳಿಕೆಯ ಕುರಿತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತ ಚಿಕ್ಕಬಳ್ಳಾಪುರ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಮೇಲೆ ಕ್ರಮಸಂಖ್ಯೆ: (3)ರಲ್ಲಿ ಓದಲಾದ ದಿನಾಂಕ 7-11-2015 ರ ವರದಿಯಲ್ಲಿ ಶ್ರೀ ಇಂದ್ರೇಶ್, ಹಿಂದಿನ ಕಾನಿಅ, ತಾಪಂ, ಗುಡಿಬಂಡೆ, ಇವರ ವಿರುದ್ಧದ ಒಟ್ಟು 11 ಆರೋಪಗಳ ಪೈಕಿ 8 ಆರೋಪಗಳಿಗೆ ಸಂಬಂಧಿಸಿದಂತೆ (ಆರೋಪ ಸಂಖ್ಯೆ: 1,2,4,5 ಮತ್ತು 7 ರಿಂದ 11) ಆರೋಪ ಸಾಬೀತುಪಡಿಸಲು ತಮ್ಮ ಕಚೇರಿಯಲ್ಲಿ ಯಾವುದೇ ದಾಖಲೆಗಳು ಲಭ್ಯವಿರುವುದಿಲ್ಲವೆಂದು ವರದಿ ಮಾಡಿರುತ್ತಾರೆ. ಉಳಿದಂತೆ ಆರೋಪ ಸಂಖ್ಯೆ 3 ರಲ್ಲಿ ಗುಡಿಬಂಡೆ ತಾಲ್ಲೂಕಿನ ಸೋಮನಹಳ್ಳಿ ಗ್ರಾಮ ಪಂಚಾಯತಿ ಕಛೇರಿಯಲ್ಲಿ ದಿನಾಂಕ 12-12-2013 ರಂದು ಬೆಂಕಿ ಬಿದ್ದು ದಾಖಲೆಗಳು ಸುಟ್ಟು ಹೋಗಿರುವ ಬಗ್ಗೆ ಸಮರ್ಪಕವಾಗಿ ಪರಿಶೀಲಿಸಿ ವರದಿ ಮಾಡದೇ ಕರ್ತವ್ಯಲೋಪ ಎಸಗಿದ್ದಾರೆಂಬ ಬಗ್ಗೆ ಆರೋಪಿಸಲಾಗಿದ್ದು, ನಿರ್ದಿಷ್ಟವಾಗಿ ಈ ಆರೋಪವನ್ನು ಸಾಬೀತುಪಡಿಸಲು ಯಾವುದೇ ಸಮರ್ಪಕ ದಾಖಲೆಗಳನ್ನು ಮುಖ್ಯ ಕಾರ್ಯನಿವಾಹಕ ಅಧಿಕಾರಿಯವರು ಸಲ್ಲಿಸಿರುವುದಿಲ್ಲ. ಕೇವಲ ಸದರಿಯವರು ಸರಿಯಾಗಿ ಕರ್ತವ್ಯ

ನಿರ್ವಹಿಸಿಲ್ಲವೆಂಬ ವರದಿಯನ್ನಾಧರಿಸಿ ಸದರಿಯವರ ವಿರುದ್ಧ ಆರೋಪ ಸಾಬೀತಾಗಿದೆಯೆಂದು ಪರಿಗಣಿಸುವುದು ಸಮಂಜಸವೆನಿಸುವುದಿಲ್ಲ.

ಮುಂದುವರೆದು, ಶ್ರೀ ಇಂದ್ರೇಶ್, ಇವರ ವಿರುದ್ಧದ 6 ನೇ ಆರೋಪದಲ್ಲಿ ದಿನಾಂಕ 16-12-2013 ರಂದು ನಡೆದ ಜಿಲ್ಲಾ ಪಂಚಾಯತಿ ಸಾಮಾನ್ಯ ಸಭೆಯಲ್ಲಿ ಸೋಮನಹಳ್ಳಿ ಗ್ರಾಮ ಪಂಚಾಯತಿಗೆ ಸಂಬಂಧಿಸಿದಂತೆ ಶ್ರೀಮತಿ ಸಾವಿತ್ರಮ್ಮ, ಸದಸ್ಯರು ಮತ್ತು ಇತರ ಸದಸ್ಯರು ಗಂಭೀರ ಆರೋಪ ಮಾಡಿದ್ದು, ಸದರಿ ಸಭೆಯಲ್ಲಿ ಗೊಂದಲ ಉಂಟು ಮಾಡಿ ಸದಸ್ಯರ ನಡುವೆ ವಾಕ್ ಸಮರಕ್ಕೆ ಕಾರಣರಾಗಿ ಜಿಲ್ಲಾ ಪಂಚಾಯತ್ ಸಾಮಾನ್ಯ ಸಭೆಯ ಸಮಯ ಹಾಳು ಮಾಡಲು ಕಾರಣರಾಗಿರುತ್ತಾರೆಂಬ ಆರೋಪವು ಸಹ ಸಮಂಜಸಗಿರುವುದಿಲ್ಲ. ಜಿಲ್ಲಾ ಪಂಚಾಯತ್ ಸಾಮಾನ್ಯ ಸಭೆಯಲ್ಲಿ ಸೋಮನಹಳ್ಳಿ ಗ್ರಾಮ ಪಂಚಾಯತಿ ಕಛೇರಿಯಲ್ಲಿ ಬೆಂಕಿ ಬಿದ್ದ ವಿಷಯದ ಕುರಿತು ಪ್ರಸ್ತಾಪಿಸಿದ ಸಮಯದಲ್ಲಿ ಸದಸ್ಯರುಗಳ ಮಧ್ಯೆ ನಡೆದ ಮಾತಿನ ಚಕಮತಿಗೆ ಶ್ರೀ ಇಂದ್ರೇಶ್, ಇವರು ಕಾರಣರೆಂದು ಆರೋಪಿಸಿ ಜವಾಬ್ದಾರರನ್ನಾಗಿಸುವುದು ಸಮಜಂಸವಾಗಿರುವುದಿಲ್ಲ.

ಶ್ರೀ ಇಂದ್ರೇಶ್, ಇವರ ವಿರುದ್ಧ ಮಾಡಲಾಗಿರುವ ಒಟ್ಟು 11 ಆರೋಪಗಳ ಬಗ್ಗೆ ಸ್ಪಷ್ಟವಾದ ನಿರ್ಣಯ ಕೈಗೊಳ್ಳಲು ಯಾವುದೇ ಪೂರಕ ದಾಖಲೆಗಳ ಆಧಾರವಿರುವುದಿಲ್ಲವಾದ್ದರಿಂದ ಹಾಗೂ ಅಧಿಕಾರಿಯವರ ವಿರುದ್ಧ ಲಘು ಸ್ವರೂಪದ ಮತ್ತು ಕರ್ತವ್ಯಲೋಪದಂತಹ ಆರೋಪಗಳಿರುವುದು ಕಂಡು ಬರುತ್ತದೆ.

ಆದುದರಿಂದ, ಶ್ರೀ ಇಂದ್ರೇಶ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ, ಗುಡಿಬಂಡೆ, ಇವರ ವಿರುದ್ದದ ಆರೋಪಗಳು ಮತ್ತು ಅವರು ಸಲ್ಲಿಸಿರುವ ಲಿಖಿತ ರಕ್ಷಣಾ ಹೇಳಿಕೆಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯಿತಿ ಚಿಕ್ಕಬಳ್ಳಾಪುರ ಇವರ ಅಭಿಪ್ರಾಯವನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಶ್ರೀ ಇಂದ್ರೇಶ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ, ಗುಡಿಬಂಡೆ, ಇವರ ವಿರುದ್ದದ ಶಿಸ್ತುಕ್ರಮವನ್ನು ಕೈಬಿಡಲು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 228 ವಿಸೇಬಿ 2013,</u>
<u>ಬೆಂಗಳೂರು, ದಿನಾಂಕ: 07-01-2016.</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ಸರ್ಕಾರವು ಶ್ರೀ ಇಂದ್ರೇಶ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ, ಗುಡಿಬಂಡೆ, ಪ್ರಸ್ತುತ ಅಧೀನ ಕಾರ್ಯದರ್ಶಿ, ಕರ್ನಾಟಕ ಸರ್ಕಾರದ ಸಚಿವಾಲಯ, ಇವರಿಗೆ ಕ್ರಮಾಂಕ ಗ್ರಾಅಪ 228 ವಿಸೇಬಿ 2013 ದಿನಾಂಕ : 03.02.2014ರ ನೋಟೀಸಿನ ಜೊತೆ ಜಾರಿ ಮಾಡಿರುವ ಆರೋಪಗಳಿಂದ ದೋಷಮುಕ್ತಗೊಳಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

T. Manju 7.1.16
(ಟಿ.ಮಂಜುನಾಥ್)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ)(ಸೇ-ಬಿ & ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ:

1. ಮಹಾಲೇಖಪಾಲರು, (ಎ&ಇ) ಕರ್ನಾಟಕ, ಬೆಂಗಳೂರು.

GO

2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ವಿಧಾನ ಸೌಧ, ಬೆಂಗಳೂರು
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಚಿಕ್ಕಬಳ್ಳಾಪುರ.
4. ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸು ಇಲಾಖೆ (ಸೇವೆಗಳು– 6) ವಿಧಾನ ಸೌಧ, ಬೆಂಗಳೂರು.
5. ಸಂಬಂಧಿಸಿದ ಅಧಿಕಾರಿಗೆ (ಮು.ಕಾ.ನಿ.ಅ.ಜಿಪಂ. ಚಿಕ್ಕಬಳ್ಳಾಪುರ ಇವರ ಮುಖಾಂತರ)

ಪ್ರತಿಯನ್ನು ಮಾಹಿತಿಗಾಗಿ:-

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ(ಪಂ.ರಾಜ್)/ ಉಪ ಕಾರ್ಯದರ್ಶಿ (ಆಡಳಿತ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರ ಆಪ್ತ ಶಾಖೆಗೆ.
2) ವಿಶೇಷಾಧಿಕಾರಿ, ಗಣಕ ಕೋಶ, ಗ್ರಾ.ಅ.ಪಂ.ರಾಜ್ ಇಲಾಖೆ.
3) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.